OS 85/2021

PW-4

ದಿನಾಂಕಃ **08.08.2022** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಪಿ.ವಿ.ವೈ ವಕೀಲರಿಂದಃ**

ನಾನು 2009 ರಿಂದ ನನಗೆ ಪತ್ರ ಬರಹಗಾರರಾಗಿ ಲೈಸೆನ್ಸ ಬಂದ ನಂತರದಿಂದ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ಪತ್ರ ಬರೆಸುವಾಗ ಕೆಲವೊಮ್ಮೆ ಸಹಿ ಮಾಡಲು ಬರದವರು ಅಂದರೆ ಹೆಬ್ಬೆಟ್ಟು ಗುರುತು ಹಾಕುವವರು ಬರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಪತ್ರಕ್ಕೆ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿಸುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ಪತ್ರಕ್ಕೆ ಅಡ್ಡಡ್ಡವಾಗಿ ಹೆಬ್ಬೆಟ್ಟಿನ ಗುರುತನ್ನು ಹಾಕಿಸುತ್ತೇವೆ. ಆ ರೀತಿ ಹೆಬ್ಬೆಟ್ಟಿನ ಗುರುತು ಹಾಕಿಸಿದ ನಂತರ ಎಡಗೈ ಹೆಬ್ಬೆಟ್ಟಿನ ಗುರುತು ಎಂದು ಬರೆದು ಅದನ್ನು ಗುರುತಿಸಿ ನಾವು ಸಹಿ ಮಾಡುತ್ತೇವೆ ಎಂದರೆ ಸರಿ. ಅಕ್ಷರ ಬರದವರಿಗೆ ಪತ್ರಕ್ಕೆ ಉದ್ದುದ್ದವಾಗಿ ಹೆಬ್ಬೆಟ್ಟಿನ ಗುರುತು ಹಾಕಿ ಎಂದು ಸಾಮಾನ್ಯವಾಗಿ ನೀವೇನು ಹೇಳುವುದಿಲ್ಲ ಎಂದರೆ ಸಾಕ್ಷಿ ಹೇಳುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ.1(ಡಿ) ನನ್ನದೇ ಸಹಿ. ನಿಪಿ.1 ರಲ್ಲಿ ಕಾಣುವ ಹೆಬ್ಬೆಟ್ಟಿನ ಗುರುತು ಲಕ್ಷ್ಮೀದೇವಮ್ಮನವರ ಎಡಗೈ ಹೆಬ್ಬೆಟ್ಟಿನ ಗುರುತು ಎಂದು ಗುರುತಿಸಿ ಸಹಿಯನ್ನು ಮಾಡಿಲ್ಲ ಎಂದರೆ ಸಾಕ್ಷಿ ಮಾಡಿಲ್ಲ, ಉದ್ದುದ್ದವಾಗಿ ಹೆಬ್ಬಟ್ಟಿನ ಗುರುತು ಇರುವ ಕಾರಣ ನಾನು ಆ ರೀತಿ ಗುರುತಿಸಿ ಸಹಿ ಮಾಡಲಿಲ್ಲ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ನಿಮಗೆ ಗೊತ್ತಿರುವಂತಹವರು ಬಂದು ಪತ್ರಕ್ಕೆ ಸಹಿ ಹಾಕಿಕೊಡುವಂತೆ ಕೇಳಿಕೊಂಡರೇ ನೀವು ಸಹಿ ಹಾಕಿಕೊಡುತ್ತೀರಿ ಎಂದರೆ ಸಾಕ್ಷಿ ಗೊತ್ತಿರುವಂತಹವರು ಬಂದು ಕೇಳಿದರೆ ಸಹಿ ಹಾಕಿ ಕೊಡುತ್ತೇನೆ ಎಂದು ಉತ್ತರಿಸುತ್ತಾರೆ. ಸೋಮನಾಥ ಮತ್ತು ನಾಗರಾಜ ರವರು ನಿಮಗೆ ಬಹಳ ಪರಿಚಯದವರಾದ ಕಾರಣ ನೀವು ಅವರು ತಯಾರುಮಾಡಿಕೊಂಡು ಬಂದ ಪತ್ರಕ್ಕೆ ಪತ್ರ ಬರಹಗಾರರಾಗಿ ಸಹಿ ಹಾಕಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ, ನನಗೆ ಅವರ ಪರಿಚಯವೇ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಮೇಲಿನ ರೀತಿ ಸುಳ್ಳು ಹೇಳುತ್ತಿದ್ದೀರಿ ಸೋಮನಾಥ ಮತ್ತು ನಾಗರಾಜ ನಿಮಗೆ ಪರಿಚಯದವರಾಗಿದ್ದು, ಅವರು ರೆಡಿ ಮಾಡಿಕೊಂಡು

ಬಂದ ಪತ್ರಕ್ಕೆ ನೀವು ಕುರುಡಾಗಿ ಸಹಿ ಮಾಡಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಹೆಬ್ಬೆಟ್ಟಿನ ಗುರುತನ್ನು ಗುರುತಿಸಿ ಸಹಿ ಹಾಕಿಲ್ಲದೇ ಇರುವುದೇ ನೀವು ಸೋಮನಾಥ ಮತ್ತು ನಾಗರಾಜ ರೆಡಿ ಮಾಡಿಕೊಂಡು ಬಂದ ಪತ್ರಕೆ ಸಹಿ ಹಾಕಿರುವುದು ಗೊತ್ತಾಗುತ್ತದೆ ಎಂದರೆ ಸಾಕ್ಷಿ ನೇರವಾಗಿ ಹೆಬ್ಬೆಟ್ಟಿನ ಗುರುತು ಹಾಕಿದ್ದರಿಂದ ನಾನು ಗುರುತಿಸಿ ಸಹಿ ಹಾಕಲಿಲ್ಲ ಎಂದು ಉತ್ತರಿಸುತ್ತಾರೆ. ಅಕ್ಷರ ಗೊತ್ತಿಲ್ಲದವರಿಗೆ ಪತ್ರಕ್ಕೆ ಅಡ್ಡಡ್ಡವಾಗಿ ಹೆಬ್ಬೆಟ್ಟಿನ ಗುರುತು ಹಾಕುವಂತೆ ನೀವೇ ಹೇಳಿ ಹಾಕಿಸುವುದಾಗಿ ಹೇಳಿರುತ್ತೀರಿ ಆದರೆ ಈ ಕೇಸಿನಲ್ಲಿ ಮೊದಲೇ ರೆಡಿ ಮಾಡಿ ತಂದ ಪತ್ರವಾಗಿರುವ ಕಾರಣ ಹೆಬ್ಬೆಟ್ಟಿನ ಗುರುತು ಗುರುತಿಸಿ ನೀವು ಸಹಿ ಹಾಕಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಿಃ 09.09.2020 ರಂದು ಲಕ್ಷ್ಮೀದೇವಮ್ಮನವರು ಪಾವಗಡಕ್ಕೆ ಬಂದೇ ಇಲ್ಲ, ನೀವೆಲ್ಲರೂ ಸೇರಿ ಆ ದಾಖಲಾತಿಯನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸಾಕ್ಷಿ ಆ ದಿನ ಎಲ್ಲರೂ ಬಂದು ಪತ್ರ ಮಾಡಿಸಿಕೊಂಡು ಹೋದರು ಎಂದು ಉತ್ತರಿಸುತ್ತಾರೆ. ದಿಃ 24.07.2020 ರಿಂದ ಲಕ್ಷ್ಮೀದೇವಮ್ಮನವರು ಶಾರದಾಂಬಾ ಟ್ರಸ್ಟ ವೃದ್ಧಾಶ್ರಮದಲ್ಲಿ ಇರುವುದರಿಂದ ಅವರು ದಿಃ 09.09.2020 ರಂದು ಪಾವಗಡಕ್ಕೆ ಬಂದು ಅಗ್ರಿಮೆಂಟ್ ಮಾಡಿಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ದಿಃ 09.09.2020 ರಂದು ಅಗ್ರಿಮೆಂಟ್ ಮಾಡಿಕೊಟ್ಟರು ಎಂದು ಉತ್ತರಿಸುತ್ತಾರೆ. ದಿಃ 24.07.2020 ರಿಂದ ಲಕ್ಷ್ಮೀದೇವಮ್ಮನವರು ಶಾರದಾಂಬಾ ಟ್ರಸ್ಟ ವೃದ್ಧಾಶ್ರಮದಲ್ಲಿ ಇದ್ದು ದಿಃ 09.09.2020 ರಂದು ಅವರನ್ನು ನೋಡಲು ಅಥವಾ ಕರೆದುಕೊಂಡು ಹೋಗಲು ಯಾರು ಬಂದಿಲ್ಲ ಎಂದು ಆ ಆಶ್ರಮದವರು ಹಿಂಬರಹ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ದಿಃ 09.09.2020 ರಂದು ಲಕ್ಷ್ಮೀದೇವಮ್ಮ ಇದ್ದರು ಎಂದು ಉತ್ತರಿಸುತ್ತಾರೆ. ಸೋಮನಾಥ ಮತ್ತು ನಾಗರಾಜ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಕೃತಕ ದಾಖಲಾತಿಯನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮೀದೇವಮ್ಮನವರು ದಿಃ 09.09.2020 ರಂದು ಪಾವಗಡಕ್ಕೆ ಬಂದೇ ಇಲ್ಲ , ಯಾವುದೇ ಕರಾರನ್ನು ಬರೆದುಕೊಟ್ಟಿಲ್ಲ, ಮತ್ತು ಮುಂಗಡ ಹಣವನ್ನು ಸ್ವೀಕರಿಸಿಲ್ಲ, ಕೃತಕ ದಾಖಲಾತಿಯನ್ನು

ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕೃತಕ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದಾರೆ ನಿಮ್ಮ ಹಾಗೂ ಸೋಮನಾಥ ಮತ್ತು ನಾಗರಾಜ ರವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಸುವಂತೆಯು ಅವರು ಕೇಳಿಕೊಂಡಿದ್ದಾರೆ ಎಂದರೆ ಸಾಕ್ಷಿ ನಾವು ಅಂತಹ ಕೆಲಸಕ್ಕೆ ಹೋಗುವುದಿಲ್ಲ ಎಂದು ಉತ್ತರಿಸುತ್ತಾರೆ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.